ಮಾಡಿದ್ದರು. ಅದರ ಬಗ್ಗೆ ಏನು ಮಾಡಿದ್ದೀರಿ?

MR.SPEAKER:- It is altogether a different question...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಇದಕ್ಕೆ ಸಂಬಂಧಪಟ್ಟಿದ್ದುದು ಇದು.

ಅಧ್ಯಕ್ಷರು:- ಯಾವುದಕ್ಕೆ ಸಂಬಂಧಪಟ್ಟಿದೆ? ನೀವು ಕೇಳುತ್ತಾ ಇರಿ, ಅವರು ಹೇಳುತ್ತಾರೆ. ನನ್ನ ಪಾಡಿಗೆ ನಾನು ಮೂರು ಗಂಟೆ ಪ್ರಶ್ನೋತ್ತರ ವೇಳೆಯನ್ನು ನಡೆಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಎರಡೂ ಸದನಗಳ ಸಮಿತಿಯ ರಚನೆಯಾಗಿ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು:- ಫ್ರಂಟ್ ಸೀಟ್‌ನಲ್ಲಿ ಇರತಕ್ಕಂಥ ನೀವೇ ರಿಯಲೈಸ್ ಮಾಡಿಕೊಳ್ಳದೇ ಹೋದರೆ ಹೇಗೆ? ನೀವು ರಿಯಲೈಸ್ ಮಾಡಿಕೊಂಡರೆ ಬೇರೆ ಯಂಗ್‌ಸ್ಟರ್ಸ್‌ಗೆ ನಾನು ಹೇಳಬಹುದು. ಫ್ರಂಟ್ ಬೆಂಚ್‌ನಲ್ಲಿರುವ ನೀವೇ ಕೋಪರೇಟ್ ಮಾಡದೇ ಹೋದರೆ your question is not connected with this question. This question is primarily relating to rejuneviation. You are asking a policy matter which does not come within the perview of this question.

SRI G.V.SRIRAMAREDDY:- I am not asking about policy matter.....

ಅಧ್ಯಕ್ಷರು:- ದೇಶಪಾಂಡೆಯವರೇ, ನೀವು ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ:- ಆ ಸಮಿತಿಯು ಇದರ ಬಗ್ಗೆ ರಿಪೋರ್ಟ್ ಕೊಟ್ಟಿದೆ. ಆ ರಿಪೋರ್ಟನ್ನು ಗಮನದಲ್ಲಿಟ್ಟಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆ ವಿವರ ಬೇಕಾದರೆ ಬೇರೆ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇನೆ.

ಅಧ್ಯಕ್ಷರು:- ನೀವು ಮಿನಿಷ್ಟರ್ ಆಗಿರತಕ್ಕಂಥವರು ಕ್ವಶ್ಚನ್‌ಗೆ ಸಂಬಂಧಪಡದೇ ಇರತಕ್ಕಂಥಾದ್ದು ಕೇಳಿದರೆ ದಯಮಾಡಿ ನೋಟೀಸ್ ಕೇಳಿ. You please say that you cannot answer. That will help. Otherwise, it becomes difficulty. Every question becomes debate here...

ವಿಷಯ:- ಪುತ್ತೂರು ಪುರಸಭೆಯ ಕುಡಿಯುವ ನೀರಿನ ವ್ಯವಸ್ಥೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 65 (417)

ಶ್ರೀ ಬಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಪುತ್ತೂರು ಪುರಸಭೆಯು ವಿಸ್ತರಣೆಗೊಂಡಿದ್ದು ಈಗಿರುವ ಕುಡಿಯುವ ನೀರಿನ ವ್ಯವಸ್ಥೆ ವಿಸ್ತೃತ ಪುರಸಭಾ ಸ್ಥಳಗಳಿಗೆ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವೀರಮಂಗಲದ ಬಳಿಯಿಂದ ಕುಮಾರಾ ಧಾರಾ ನದಿಯಿಂದ ನೀರು ಸರಬರಾಜು ಮಾಡುವ 2ನೇ ಹಂತದ ಯೋಜನೆಯ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಇಲ್ಲ.

ಇ) ಮೇಲೆ ತಿಳಿಸಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ವಿ.ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಪುರಸಭೆ ವಿಸ್ತರಣೆಗೊಂಡಿದ್ದು ಈಗಿರುವ ಕುಡಿಯುವ ನೀರಿನ ವ್ಯವಸ್ಥೆ ವಿಸ್ತೃತ ಪುರಸಭಾ ಸ್ಥಳಗಳಿಗೆ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಹೇಳಿದ್ದಾರೆ. ಇಲ್ಲಿ ಒಂದು ಪ್ರಶ್ನೆ ಎಂದರೆ ಯಾವುದು ಗ್ರಾಮಪಂಚಾಯತಿಯಿಂದ ಈಗ ವಿಭಜನೆಗೊಂಡು ಪುರಸಭೆಗೆ ಸೇರಿದೆ, ಅಂತಹ ಪ್ರದೇಶಗಳು ಕುಡಿಯುವ ನೀರು ಒಂದೇ ಅಲ್ಲ, ಎಲ್ಲ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಅವರು ಕುಡಿಯುವ ನೀರು ಬಗ್ಗೆ ಮುನಿಸಿಪಾಲಿಟಿಯನ್ನು ಕೇಳಿದರೆ ನಮ್ಮದೇನೂ ಹೊಸ ಎಕ್ಸಟೆನ್‌ಶನ್ ಮಾಡಿಲ್ಲ, ನೀರಿಲ್ಲವೆಂದು ಹೇಳುತ್ತಾರೆ. ಪಂಚಾಯತ್‌ನ್ನು ಕೇಳಿದರೆ ನಿಮ್ಮದು ಈಗಾಗಲೇ ನೋಟಿಫೈಡ್ ಏರಿಯಾ ಆಗಿದ್ದು ನೀವು ಮುನಿಸಿಪಾಲಿಟಿ ಒಳಗಡೆ ಇದ್ದೀರಿ, ನಿಮಗೆ ಕುಡಿಯುವ ನೀರು ಕೊಡುವುದಕ್ಕೆ ನಮ್ಮಿಂದ ಈಗ ಲಭ್ಯವಾಗುವುದಿಲ್ಲ ಎಂದು ಹೀಗೆ ತ್ರಿಶಂಕು ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಸರ್ಕಾರ ಈ ಬಗ್ಗೆ ಏನು ಸ್ಪಷ್ಟವಾದ ಕ್ರಮ ತೆಗೆದುಕೊಳ್ಳುತ್ತದೆ? ಇದು ಒಂದನೆಯ ಪ್ರಶ್ನೆ. ಎರಡನೆಯದು ಈಗಾಗಲೇ ನಾವು ಸರ್ಕಾರಕ್ಕೆ, ಪುತ್ತೂರು ಪುರಸಭೆಗೆ ಬೇಕಾದ ಎರಡನೆಯ ಹಂತದ ಯೋಜನೆ ಮಾಡಬೇಕೆಂದು ಕೇಳಿದ್ದೇವೆ. ಪ್ರಸಕ್ತ ಜನಸಂಖ್ಯೆ ಸುಮಾರು 25 ಸಾವಿರ ಇದ್ದದ್ದು ಈಗ 45 ಸಾವಿರಕ್ಕೆ ಏರಿಕೆಯಾಗಿದೆ. ಸುಮಾರು 45 ಲಕ್ಷ ಲೀಟರ್ ನೀರಿನ ಅಗತ್ಯವಿದ್ದು, ಕೇವಲ ಬೋರ್‌ವೆಲ್ ಮತ್ತು ಕುಮಾರಧಾರಾ ನೀರಿನ ಯೋಜನೆಯಿಂದ 18 ಲಕ್ಷ ಲೀಟರ್ಸ್ ಮಾತ್ರ ಸಿಗುತ್ತಿದೆ. ಸುಮಾರು 27 ಲಕ್ಷ ಲೀಟರ್ ಕೊರತೆಯನ್ನು ನಾವು ಕಾಣುತ್ತಿದ್ದೇವೆ. ಇದರಿಂದಾಗಿ

ಇಲ್ಲಿಯ ಜನ ಕಂಗೆಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸಿ ಎರಡನೇ ಹಂತದ ಯೋಜನೆಯನ್ನು ತಕ್ಷಣ ಕೈಗೆತ್ತಿಕೊಳ್ಳುವ ಪ್ರಯತ್ನ ಮಾಡುತ್ತದೆಯೆ? ಮಾಡುವುದಿಲ್ಲ ಎಂದರೆ ಮಾಡಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಈಗ ತ್ರಿಶಂಕು ಪರಿಸ್ಥಿತಿಯಲ್ಲಿ ಇರುವಂಥ ಗ್ರಾಮಾಂತರ ಪ್ರದೇಶದಿಂದ ನಗರಕ್ಕೆ ಸೇರಿದಂಥ ನಗರಸಭೆಯ ವ್ಯಾಪ್ತಿಗೆ ಬರುವಂಥ ಜನರ ಕುಡಿಯುವ ನೀರಿನ ಸಮಸ್ಯಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ಏನೆಂದರೆ ಈಗ ಪುತ್ತೂರಿನ ಜನಸಂಖ್ಯೆ 28 ಸಾವಿರ ಇದೆ. ಈ ಹಿಂದೆಯೇ 1984ರಲ್ಲಿ ಕುಮಾರಾಧಾರಾ ಅಂತ ಹೇಳಿ ಇಲ್ಲಿಂದ ಸುಮಾರು ಆರು ಕಿಲೋಮೀಟರ್ ದೂರದಿಂದ ನೀರಿನ ಸರಬರಾಜು ಆಗುತ್ತಿದೆ. ಇದರಲ್ಲಿ 41 ಲಕ್ಷ ರೂಪಾಯಿಗಳನ್ನು ಇತ್ತೀಚೆಗೆ ಹೊಟ್ಟು ಅದನ್ನು ಅಭಿವೃದ್ಧಿ ಮಾಡುವ ದಿಸೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಅವರ ಕಾಳಜಿ ಈಗ ಹೊಸದಾಗಿ ಏಳು ಹಳ್ಳಿಗಳನ್ನು ಸೇರಿಸಿಕೊಂಡಿದ್ದಾರೆ. ತಬಕಾ, ಬನ್ನೂರು, ಕದನೂರು, ಆರ್ಯಾಪುರು, ಕುಮಂಜೆ, ಒಳನಾಡು, ಚಿಕ್ಕಮಂಜೂರು ಅಂತ ಹೇಳಿ 7 ಗ್ರಾಮಗಳನ್ನು ಇದರ ವ್ಯಾಪ್ತಿಯೊಳಗೆ ವಿಸ್ತೃತ ಎಕ್ಸ್‌ಟೆಂಡೆಡ್ ಮುನಿಸಿಪಾಲಿಟಿಯೊಳಗೆ ಬರುತ್ತದೆ. ಆದ್ದರಿಂದ ಎರಡನೇ ಹಂತದಲ್ಲಿ ಈ ಯೋಜನೆಯನ್ನು ರೂಪಿಸಿ, ಈಗ ಇರತಕ್ಕಂಥ ನೀರು ಸಾಕಾಗುವುದಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಪುರಸಭೆ ತನ್ನ ವಂತಿಕೆಯನ್ನು ತುಂಬ ಬೇಕಾಗುತ್ತದೆ. ಜೊತೆಗೆ ಈ ಎರಡನೇ ಹಂತದ ಕುಮಾರಧಾರಾದಿಂದ ನೀರು ತರಬೇಕಾದರೆ ಬೇರೆ ಯೋಜನೆಯನ್ನು ನಾವು ರೂಪಿಸಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಪರಿಶೀಲನೆ ಮಾಡಿ ಈ ಯೋಜನೆಯನ್ನು ಸರ್ವೆಮಾಡಿ ನಾವು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ:- ಕುಡಿಯುವ ನೀರಿಗೆ ಏಕ ರೂಪದ ದರದ ಅನುಷ್ಠಾನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 66 (458)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯಾದ್ಯಂತ ಈ ಮೊದಲು ಕುಡಿಯುವ ನೀರಿನ ದರವನ್ನು ಏಕ ರೂಪವಾಗಿ ಜಾರಿಗೆ ಮಾಡಲು ನಿರ್ಧರಿಸಿದ್ದನ್ನು ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಏಕರೂಪ ನೀರಿನ ದರ ನಿರ್ಣಯದ ಅನುಷ್ಠಾನಕ್ಕೆ ನೀಡಿರುವ ತಡೆಯಾಜ್ಞೆಯನ್ನು ತೆಗೆದು ಸರ್ಕಾರದ ನಿರ್ಧಾರವನ್ನು ಕಾರ್ಯಗತಗೊಳಿಸಲಾಗುವುದೇ

3) ಹಾಗಿದ್ದಲ್ಲಿ ಅದನ್ನು ಎಂದಿನಿಂದ ಜಾರಿಗೆ ತರಲಾಗುವುದು?